**Crl. Mis. 361/2020** ಪಿ ಡಬ್ಲ್ಯೂ 1

ದಿನಾಂಕಃ 08-07-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು

ಮುಖ್ಯ ವಿಚಾರಣೆ ಶ್ರೀ ಹೆಚ್ ಡಿ ವಕೀಲರಿಂದಃ

ನಾನು ಅರ್ಜಿದಾರಳು ಇದ್ದೇನೆ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಗೆ ಪ್ರತಿಜ್ಞಾ ಪತ್ರವನ್ನು ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ. ನನ್ನ ಅರ್ಜಿಯ ಸಲುವಾಗಿ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ನಿಶಾನೆಗೊಳಿಸಬೇಕಾಗಿ ಪ್ರಾರ್ಥನೆ.

ದಿಃ 02-11-2020 ರ ನೋಟೀಸಿನ ಕಛೇರಿ ನಕಲನ್ನು ನಿಪಿ-1 ಎಂದು, ಸಂತೋಷ್.ಎಸ್. ರವರಿಗೆ ಕಳುಹಿಸಿ ವಾಪಸ್ಸು ಬಂದಿರುವ ಆರ್.ಪಿ.ಡಿ. ಲಕೋಟೆಯನ್ನು ನಿಪಿ-2 ಎಂದು, ನಿಪಿ-2 ಅನ್ನು ನ್ಯಾಯಾಲಯದ ಮುಂದೆ ತೆಗೆದು ಅದರಲ್ಲಿರುವ ದಿಃ 02-11-2020 ರ ನೋಟೀಸನ್ನು ನಿಪಿ-3 ಎಂದು, ಪುನಃ ಸಂತೋಷ್.ಎಸ್. ರವರಿಗೆ ಕಳುಹಿಸಿರುವ ಆರ್.ಪಿ.ಡಿ. ಲಕೋಟೆಯನ್ನು ನಿಪಿ-4 ಎಂದು, ನಿಪಿ-4 ಅನ್ನು ನ್ಯಾಯಾಲಯದ ಮುಂದೆ ತೆಗೆದು ಅದರಲ್ಲಿರುವ ನೋಟೀಸನ್ನು ನಿಪಿ-5 ಎಂದು, ದಿಃ 23-11-2020 ರಂದು ವಕೀಲರು ಸಂತೋಷ್.ಎಸ್ ಎನ್ನುವವರ ಬೇರೆ ವಿಳಾಸಕ್ಕೆ ಕಳುಹಿಸಿರುವ ನೋಟೀಸಿನ ಕಛೇರಿ ನಕಲನ್ನು ನಿಪಿ-6 ಎಂದು, ಅಂಚೆ ರಶೀದಿಯನ್ನು ನಿಪಿ-7 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ-8 ಎಂದು, 07-12-2020 ರ ದಿನಾಂಕದಂದು ಸಂತೋಷ್.ಎಸ್. ರವರು ಕಳುಹಿಸಿದ ಉತ್ತರವನ್ನು ನಿಪಿ-9 ಎಂದು, ಅದಕ್ಕೆ ಸಂಬಂಧಪಟ್ಟ ಅಂಚೆ ಲಕೋಟೆಯನ್ನು ನಿಪಿ-10 ಎಂದು, ವಿವಾಹಕ್ಕೆ ಸಂಬಂಧಪಟ್ಟಿವೆ ಎಂದು ಹಾಜರುಪಡಿಸುವ ಒಟ್ಟು ಛಾಯಾ ಚಿತ್ರಗಳನ್ನು ಕ್ರಮವಾಗಿ ನಿಪಿ -11 ರಿಂದ 13 ಎಂದು, 18-12-2020 ರಂದು ಸಂತೋಷ್.ಎಸ್. ರವರಿಗೆ ಕಳುಹಿಸಿದ ನೋಟೀಸಿನ ಕಛೇರಿ ನಕಲನ್ನು ನಿಪಿ-14 ಎಂದು, ಸುಷ್ಮಾ ದಿಕ್ಷೀತ್ ಹೆಸರಿನ ಆಧಾರ್ ಕಾರ್ಡ್‌ಅನ್ನು ನಿಪಿ-15 ಎಂದು, 28-12-2012 ದಿನಾಂಕದ ನೊಂದಾಯಿತು ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ16 ಎಂದು, ನೊಂದಣಿ ವಿವಾಹದ ಪ್ರಮಾಣ ಪತ್ರವನ್ನು ನಿಪಿ -17 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಏಕಪಕ್ಷೀಯ ಪ್ರಕರಣ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶಿಕಾರಿಪುರ